"ಹುಯ್ಯೋ ಹುಯ್ಯೊ ಮಳೆರಾಯ ಹತ್ತಿಹೊಲ ಬೆಳಿಬೇಕು ಮಳೆರಾಯ" ಆತನ ಮನಸ್ಸು ಶತಕೋಟಿ ಧ್ವನಿಯಿಂದ ಮಳೆಗಾಗಿ ಪ್ರಾರ್ಥಿಸುತ್ತಿದೆ.

ವೈಶಾಖ ಮಾಸದಲ್ಲಿಯೇ ಮಗಳ ಮದುವೆ ಮಾಡಿದ್ದ ಅನಂತರೆಡ್ಡಿ. ವರದಕ್ಷಿಣೆ, ಮದುವೆ ಖರ್ಚುಗಳಿಗೆ ಲಕ್ಷದ ಮೇಲೆ ಖರ್ಚಾಯಿತು. ಅದರಲ್ಲಿ ಐವತ್ತು ಸಾವಿರ ರೂಪಾಯಿ ಸಾಲ ತಂದಿದ್ದಾನೆ. ಸಾಲ ತೀರಿಸಲು ಹತ್ತಿಹೊಲ ಬೆಳೆದರೆ ಅನುಕೂಲ ಎಂದುಕೊಂಡು ಇದ್ದ ಹತ್ತು ಎಕರೆ ಬಿತ್ತಿದ. ಬಿತ್ತುವುದಕ್ಕೂ ಸಾಲ ಮಾಡಿದ್ದಾನೆ. ಮದ್ದು, ಗೊಬ್ಬರದ ಖರ್ಚು ಇಪ್ಪತ್ತು ಸಾವಿರ ಆಗಿದೆ. ಇನ್ನೂ ಹತ್ತುಸಾವಿರವಾದರೂ ಖರ್ಚು ಮಾಡಬೇಕು. ಎಕರೆಗೆ ಒಂದೈದಾರು ಕ್ವಿಂಟಾಲ್ ಹತ್ತಿ ಬಂದರೂ ಮದುವೆಗೆ ಮಾಡಿದ ಸಾಲದ ಹೊರೆಯ ಕೊಂಚಭಾಗವಾದರೂ ತೀರುತ್ತದೆ.

'ಮಳೆ ಬಂದರೆ ಬೇಸಿತ್ತು ಮಳೆ ಬಂದರೆ ಬೇಸಿತ್ತು.'

ಯಾರೋ ಬಂದ ಸಪ್ಪಳ ಕೇಳಿ ತಿರುಗಿ ನೋಡಿದ ಅನಂತರೆಡ್ಡಿ. ಗೊಲ್ಲರ ರಾಮ. ಭುಜದ ಮೇಲಿನ ಕಂಬಳಿ ಹಾಸಿಕೊಳ್ಳುತ್ತಾ ಇದ್ದಾನೆ.

'ಮಕ್ಕಂಡಿಯಾ ಪಟೇಲಾ?' ಕುಳಿತುಕೊಳ್ಳುತ್ತಾ ಕೇಳಿದ ರಾಮ.

'ಇಷ್ಟೊತ್ತಿಗೆ ಮಕ್ಕಂಬಗ್ಗೈತೆನಲೆ ಕಾಲ? ಇನ್ನೂ ಉಂಡಿಲ್ಲ?'

'ಹೌದಪ್ಪೋ! ದೊಡ್ಡ ಬರಗಾಲ ಬೀಳಂಗೈತೆ ಕಾಲ. ಕೆರೆಗೆ ನೀರು ಬರದಿದ್ದರೆ ಹೋಗ್ಲಿ ನೆಲತೋಯ್ಯಂಗ ಬಂದರೂ ಬೇಸೈತೆ.'

'ಹೌದಲೇ ನನಗೇನು ತಿಳಿದಂಗಾಗೈತೆ, ಹತ್ತಿಹೊಲವೆಲ್ಲಾ ಹಾಳಾಗಿಹೋಗತ್ತೈತೆ' ಎಂದ ಎದ್ದು ಕುಳಿತುಕೊಳ್ಳುತ್ತಾ ಅನಂತರೆಡ್ಡಿ.

'ನೀವು ಮಸಾರಿ ಭೂಮೇರೆ ಹಿಂಗದ್ರೆ, ದಿಬ್ಬದ ಹೊಲದೋರು ನಮ್ಗತೇನು? ನನ್ನ ಹತ್ತಿಹೊಲ ನೋಡಾಕ ಮನಸಿಲ್ಲಪ್ಪೊ, ಎಲ್ಲಾ ಒಣಗಿಹೋದಂಗಾಗಿ ಕಾಯಿ ಉದುರಾಕತ್ತೈತೆ.'

'ಕಾಯಿ ಉದುರದಂಗ ಮದ್ದು ಹೊಡೆದಿಲ್ಲಾ.'

'ಏನು ಮದ್ದಪ್ಪೋ? ನನ್ನ ಎರಡೆಕ್ಕರೆ ಹೊಲಕ್ಕ ಇಲ್ಲಿಗೇ ಮೂರುಸಾವರ ರೂಪಾಯಿ ಮದ್ದು ಹೊಡೆದಿನಿ! ಒಂದು ಮಳೆ ಬಿದ್ದಿದ್ರೂ ಬದಿಕಿಕೊಂತಿತ್ತು. ಎಲ್ಲಾ ಸಾಯೋಕಾಲ ಬಂದೈತೆ.'

'ನಿನ್ನ ಹೊಲ ಬೇಸೈತಂತಲ್ಲಲೇ?'

'ಪರವಿಲ್ಲಪ ಇವಾಗ ಗಿಡಕ್ಕ ಅರವತ್ತೆಪತ್ತು ಕಾಯೈದಾವ. ಆದರೆ ನಿಂದ್ರವಲ್ಲವು.'

'ಮೋನೋ ಕೋಟೋಪಾಸ್ ಮದ್ದು ಹೊಡೆದಿಯಾ?'

'ಏನು ಮದ್ದುಗಳೋ ವಾರಕ್ಕೊಂದ್ಸಲ ಹೊಡಿತನೇಯಿದ್ದೀನಿ. ಮದ್ದಿನೋನು ಇನ್ನ ಉದ್ರೆ ಕೊಡಂಗಿಲ್ಲಂತಾನ, ಸೊಲುಪು ನೀನು ಹೇಳಬೇಕಪ್ಪೋ, ನೀನು ಹೇಳಿದ್ರೆ ಕೇಳ್ತನ.'

'ಹಂಗೆ ಆಗ್ಲಿ ಹೇಳ್ತಿನಿ, ನಮ್ಮೋನೆ... ಒಳ್ಳೇನು... ಹತ್ತಿ ಮಾರಿದ ದಿನನೇ ನಿನ್ನ ಬಾಕಿ ತೀರಸ್ತಾನ... ಅಂತ ಹೇಳ್ತಿನಿ ಬುಡು ಚಿಂತೆ ಮಾಡ್ಬೇಡ.'

ಅವರು ಹೀಗೆ ಮಾತಾಡುತ್ತಿರುವಾಗಲೇ ಮನೆಯೊಳಗಿಂದ ಊಟದ ಕರೆಬಂತು.

ಚಿತ್ರಗಳು: ಸೃಜನ್